# ಬಿ. ವ್ಹಿ. ವ್ಹಿ. ನೇತ್ರ ಭಂಡಾರ ಮತ್ತು ಪಾರದರ್ಶಕ ಪಟಲ ಜೋಡಣಾ ಕೇಂದ್ರ, ಬಾಗಲಕೋಟ

(ಸದಸ್ಯರು, ಐ ಬ್ಯಾಂಕ್ ಅಸೋಸಿಯೇಶನ್ ಇಂಡಿಯಾ, ಹೈದ್ರಾಬಾದ್)

ಅಜೀವ ಸದಸ್ಯರು ಭಾರತೀಯ ನೇತ್ರ ಭಂಡಾರಗಳ ಸಂಘ, ಹೈದರಾಬಾದ

## ನೇತ್ರದಾನ ಶ್ರೇಷ್ಠದಾನ

**ಸಹಭಾಗಿತ್ವದೊಂದಿಗೆ**

★ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ, ಬಾಗಲಕೋಟ.

★ ಭಾರತೀಯ ವೈದ್ಯಕೀಯ ಸಂಸ್ಥೆ, ಬಾಗಲಕೋಟ.

★ ಸಂಚಾರಿ ನೇತ್ರ ಶಸ್ತ್ರಚಿಕಿತ್ಸಾ ಘಟಕ ಜಿಲ್ಲಾ ಆಸ್ಪತ್ರೆ, ಬಾಗಲಕೋಟ.

ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್
ಶ್ರೀ ಕುಮಾರೇಶ್ವರ ಆಸ್ಪತ್ರೆ ವ, ಸಂಶೋಧನಾ ಕೇಂದ್ರ,
ನವನಗರ - ಬಾಗಲಕೋಟ - ೫೮೭ ೧೦೩
ದೂರವಾಣಿ ಸಂಖ್ಯೆ - 235400, 235410, 235720, **324999**

ಮುದ್ರಣ : ಬಿ.ವ್ಹಿ.ವ್ಹಿ.ಸಂಘದ ಬಸವಲಿಂಗ ಆಫಸೆಟ್ ಪ್ರಿಂಟರ್ಸ, ಬಾಗಲಕೋಟ ಫೋನ ನಂ : 220723

ತಮಸೋಮಾ ಜ್ಯೋತಿರ್ಗಮಯ

# ನೇತ್ರದಾನಕ್ಕಿಂತ ಮಿಗಿಲಾದ ದಾನವಿಲ್ಲ

ಶ್ರೀ ಬಿ.ವಿ.ವಿ.ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ ಶ್ರೀ ಕುಮಾರೇಶ್ವರ ಆಸ್ಪತ್ರೆ, ವ, ಸಂಶೋಧನಾ ಕೇಂದ್ರ, ಬಾಗಲಕೋಟ -೫೮೭ ೧೦೧ದ ಉತ್ತರ ಕರ್ನಾಟಕದ ಒಂದು ಉತ್ತಮ ವೈದ್ಯಕೀಯ ಆಸ್ಪತ್ರೆಯಾಗಿದ್ದು, ವೈದ್ಯಕೀಯ ಎಲ್ಲ ವಿಭಾಗಗಳನ್ನೂ ಒಳಗೊಂಡಿದೆ. ರಕ್ತಭಂಡಾರ, ಮತ್ತು ಎಲ್ಲ ಸೌಲಭ್ಯಗಳುಳ್ಳ ಪ್ರಯೋಗಾಲಯವನ್ನೂ ಸಹ ಹೊಂದಿದೆ.

ಈ ಆಸ್ಪತ್ರೆಯಲ್ಲಿನ ಕಣ್ಣಿನ ವಿಭಾಗವು ಬಿ.ವ್ಹಿ.ವ್ಹಿ. ನೇತ್ರ ಭಂಡಾರ ಮತ್ತು ಪಾರದರ್ಶಕ ಪಟಲ ಜೋಡಣಾ ಕೇಂದ್ರವನ್ನು ಸ್ಥಾಪಿಸಿ ಉತ್ತರ ಕರ್ನಾಟಕಕ್ಕೆ ಮತ್ತೊಂದು ಕೊಡುಗೆ ನೀಡಿದೆ. ಇದರ ಮುಖಾಂತರ ಈ ಭಾಗದಲ್ಲಿ ಅಂಧತ್ವದಿಂದ ಬಳಲುತ್ತಿರುವ ಹಾಗೂ ಪುನರ್‌ದೃಷ್ಟಿ ಪಡೆಯಲು ಪರಿತಪಿಸುತ್ತಿರುವ ದೃಷ್ಟಿ ಹೀನರಿಗೆ, ವರದಾನವಾಗಿ ಪರಿಣಮಿಸಲಿದೆ. ಕಣ್ಣಿನ (ಕರಿಗುಡ್ಡೆ) ಪಾರದರ್ಶಕ ಪಟಲದ ಕುರುಡುತನಕ್ಕೆ (ಕಾರ್ನಿಯಲ್ ಬ್ಲೈಂಡ್‌ನೆಸ್) ಚಿಕಿತ್ಸೆ ಮಾಡಿ ದೃಷ್ಟಿದಾನ ಮಾಡಲು ಸಹಾಯ, ಸಹಕಾರ ತೋರಬೇಕಾಗಿ ವಿನಂತಿ.

ಸಹೃದಯರೂ, ಸುಸಂಸ್ಕೃತರೂ, ಸಕಲರಿಗೂ ಒಳ್ಳೆಯದನ್ನೇ ಬಯಸುವ ತಾವೆಲ್ಲರೂ ಕುರುಡುತನದಿಂದ ಕಂಗಾಲಾಗಿರುವ, ಸಮಾಜದ ತಾತ್ಸಾರಕ್ಕೆ ಬಲಿಯಾಗಿ ಅಸಹಾಯಕ ಸ್ಥಿತಿಯಲ್ಲಿರುವ ಅಂಧ ಬಂಧು ಭಗಿನಿಯರ ಬಗೆಗೆ ಅನುಕಂಪ ತೋರಿಸಿರಿ. ಅವರಿಗೂ ಸುಂದರ ಸೃಷ್ಟಿ ನೋಡುವ ಅವಕಾಶವನ್ನು ಪುನರ್‌ದೃಷ್ಟಿ ನೀಡುವುದರೊಂದಿಗೆ ಕಲ್ಪಿಸಿಕೊಡಿ, ನೇತ್ರದಾನ ಮಾಡಲು ಮುಂದೆ ಬನ್ನಿ. ಇತರೆಲ್ಲರನ್ನೂ ಪ್ರೇರೇಪಿಸಿ ನತದೃಷ್ಟರ ಬದುಕಿಗೆ ಬೆಳಕು ನೀಡುವ ಈ ಪವಿತ್ರ ಕಾರ್ಯಕ್ಕೆ ತಾವೆಲ್ಲರೂ ಸಂಪೂರ್ಣ ಸಹಕಾರ ನೀಡಿ ಮಾನವೀಯತೆಯನ್ನು ಮೆರೆಯಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

## ನೇತ್ರ ಭಂಡಾರದ ಅವಶ್ಯಕತೆ ಹಾಗು ಹಿನ್ನಲೆ

೧. ಜಗತ್ತಿನಾದ್ಯಂತ ಸುಮಾರು ೫ ಕೋಟಿಯಷ್ಟು ಜನರು ಕುರುಡರಿದ್ದಾರೆ.

೨. ಭಾರತದಲ್ಲಿ ಸುಮಾರು ಒಂದು ಕೋಟಿಯಷ್ಟು ಜನ ಕುರುಡರಿದ್ದಾರೆ.

೩. ಈ ಒಂದು ಕೋಟಿಯಲ್ಲಿ ಸುಮಾರು ೨೫ ಲಕ್ಷದಷ್ಟು ಜನರು ಪಾರದರ್ಶಕ ಪಟಲದ (ಕರಿಗುಡ್ಡೆ) ಅಂಧತೆಯಿಂದ ಬಳಲುತ್ತಿದ್ದಾರೆ.

೪. ಮೇಲ್ಕಾಣಿಸಿದ ಈ ೨೫ ಲಕ್ಷ ಅಂಧರು ಪಾರದರ್ಶಕ ಪಟಲದ ಕಸಿ ಶಸ್ತ್ರಚಿಕಿತ್ಸೆಯ ಮೂಲಕ ಪುನರ್‌ದೃಷ್ಟಿ ಪಡೆಯುವ ಹವಣಿಕೆಯಲ್ಲಿದ್ದಾರೆ.

೫. ಇಂಥವರ ಸಂಖ್ಯೆಯು ಪ್ರತಿವರ್ಷ ೨೦,೦೦೦ ಕ್ಕಿಂತ ಅಧಿಕ ಸಂಖ್ಯೆಯಲ್ಲಿ ಹೆಚ್ಚಾಗುತ್ತ ಹೋಗುತ್ತದೆ.



೬. ಈ ೨೫ ಲಕ್ಷ ಜನರು ನೇತ್ರದಾನಕ್ಕಾಗಿ ಕಾಯುತ್ತಿರುವಾಗ ನಮ್ಮ ಇಡೀ ದೇಶದಲ್ಲಿ ಪ್ರತಿವರ್ಷ ಕೇವಲ ೧೫೦೦ ಪಾರದರ್ಶಕ ಪಟಲದ ಕಸಿ ಶಸ್ತ್ರಚಿಕಿತ್ಸೆಗಳು ನಡೆಯುತ್ತವೆ.

## ವೈದ್ಯಕೀಯ ವಿವರಣೆಗಳು

೧. ಪಾರದರ್ಶಕ ಪಟಲ (Cornea) ಕಣ್ಣಿನ (ಕರಿಗುಡ್ಡೆ)ಅತ್ಯಂತ ಮಹತ್ವದ ಪಾರದರ್ಶಕ ಭಾಗ.

೨. ಪಾರದರ್ಶಕ ಪಟಲವು ಅಸಮರ್ಪಕ ಆಹಾರ ಸೇವನೆ, (ಎ ಜೀವಸತ್ವದ ಕೊರತೆಯಿಂದ) ವಿವಿಧ ರೋಗಗಳು, ಗಾಯ, ನಂಜು, ಜನನ ದೋಷ ಮುಂತಾದ ಕಾರಣಗಳಿಂದ ದುರ್ಬಲವಾಗುತ್ತದೆ. ನಿಷ್ಕ್ರಿಯವಾಗುತ್ತದೆ ಅಥವಾ ಅಪಾರದರ್ಶಕವಾಗುತ್ತದೆ. ಇದನ್ನೇ 'ಹೂ' ಕೂಡುವುದು ಅಥವಾ ಬೆಳ್ಳಗಾಗುವುದು ಎನ್ನುತ್ತಾರೆ.

೩. ಕಣ್ಣುಗುಡ್ಡೆಯ, ಪಾರದರ್ಶಕ ಪಟಲದ ಕಸಿ ಮಾಡುವ ಶಸ್ತ್ರಚಿಕಿತ್ಸೆಯು ನಿಷ್ಕ್ರಿಯ ಪಾರದರ್ಶಕ ಪಟಲದ ಭಾಗವನ್ನು ಶಸ್ತ್ರಕ್ರಿಯೆಯ ಮೂಲಕ ತೆಗೆದು ಮರಣೋತ್ತರ ದಾನ ಮಾಡಿದ ಆರೋಗ್ಯವಂತ ಪಾರದರ್ಶಕ ಪಟಲದ ಭಾಗವನ್ನು ಜೋಡಿಸುವ ವಿಧಾನವಾಗಿದೆ.

೪. ಈ ತರಹದ ಅಂಧತ್ವವು ಯಾವುದೇ ರೀತಿಯ ಔಷಧಗಳಿಂದ ಗುಣಮುಖವಾಗುವುದಿಲ್ಲ.

೫. ಮಾನವ ಪಾರದರ್ಶಕ ಪಟಲ ಬದಲಾಯಿಸಲು ಇತರ ಯಾವುದೇ ಪ್ರಾಣಿಯ ಕಣ್ಣು ಅಥವಾ ಕೃತಕ ವಸ್ತುವಿನಿಂದ ಮಾಡಿದ ಕಣ್ಣು ಉಪಯೋಗವಾಗುವುದಿಲ್ಲ.

೬. ಪಾರದರ್ಶಕ ಪಟಲದ ನಿಷ್ಕ್ರಿಯತೆಯ ಅಂಧ ರೋಗಿಗಳಿಗೆ ಮಾನವ ಪಾರದರ್ಶಕ ಪಟಲ ಮಾತ್ರ ಕಸಿಮಾಡಿ ಜೋಡಿಸಬಹುದಾಗಿದೆ.

೭. ಪಾರದರ್ಶಕ ಪಟಲ ಕಸಿ ಮಾಡುವ ಶಸ್ತ್ರಚಿಕಿತ್ಸಾ ಪದ್ಧತಿಯು ೮೫% ರಷ್ಟು ಯಶಸ್ವಿ ಚಿಕಿತ್ಸಾ ಪದ್ಧತಿಯಾಗಿದೆ.

## ಕೆಲವು ಮಹತ್ವದ ಮಾಹಿತಿಗಳು

೧. ಕಣ್ಣುಗಳನ್ನು ಜೀವಂತ ವ್ಯಕ್ತಿಗಳಿಂದ ಕಿತ್ತುಕೊಳ್ಳುವದಿಲ್ಲ, ಮರಣಾನಂತರವೇ ತೆಗೆದುಕೊಳ್ಳಲಾಗುವುದು.

೨. ಕರ್ನಾಟಕ ಕಣ್ಣುಗುಡ್ಡೆ ಕಸಿ ಮಾಡುವ ಕಾಯ್ದೆ ಪ್ರಕಾರ ಮರಣ ಹೊಂದಿದವರ ಕಣ್ಣುಗಳನ್ನು ಅವರ ಜೀವಿತ ಸಂಬಂಧಿಗಳು ದಾನ ಮಾಡಬಹುದಾಗಿದೆ.

೩. ಸಾರ್ವಜನಿಕರ ಹಿತಾಸಕ್ತಿಗನುಗುಣವಾಗಿ ನೇತ್ರದಾನ ನೀಡಿದ ಮತ್ತು ನೇತ್ರದಾನ ಪಡೆದವರಿಗೆ ಪರಸ್ಪರ ಈ ವಿಷಯವನ್ನು ತಿಳಿಯಗೊಡುವುದಿಲ್ಲ.

೪. ನೇತ್ರಗಳನ್ನು ಎಂದೆಂದೂ ಖರೀದಿಸುವುದಿಲ್ಲ ಮತ್ತು ಮಾರುವುದೂ ಇಲ್ಲ. ಆದರೆ ದಾನ ಪಡೆದು ಉಚಿತ ಕಾಣಿಕೆ ರೂಪದಲ್ಲಿ ಅಗತ್ಯವಿದ್ದವರಿಗೆ ಕಸಿ ಮಾಡಲಾಗುವುದು.

೫. ದಾನವಾಗಿ ಪಡೆದ ಕಣ್ಣುಗಳನ್ನು ಯಾವುದೇ ವರ್ಗ, ವರ್ಣ, ಜಾತಿ, ಧರ್ಮ, ಲಿಂಗ, ಅಂತಸ್ತುಗಳ ಭೇದವಿಲ್ಲದೇ ಅತ್ಯಂತ ಅಗತ್ಯವಿದ್ದವರಿಗೆ ಉಚಿತವಾಗಿ ನೀಡಲಾಗುವುದು.

೬. ನೇತ್ರದಾನಕ್ಕೆ ಹೆಸರು ನೋಂದಾಯಿಸಿದವರು ತಮ್ಮ ಕುಟುಂಬದ ಇತರ ಸದಸ್ಯರಿಗೆ, ಕುಟುಂಬದ ವೈದ್ಯರಿಗೆ ಮತ್ತು ಕುಟುಂಬ ವಕೀಲರಿಗೆ ತಿಳಿಸುವುದು ಸೂಕ್ತ ಇಲ್ಲದಿದ್ದರೆ ನೇತ್ರದಾನಕ್ಕೆ ಹೆಸರು ನೋಂದಾಯಿಸಿದ್ದರೂ, ಅವರ ಇಚ್ಛೆ ಅಪೂರ್ಣವಾಗಿಯೇ ಉಳಿಯುವ ಸಾಧ್ಯತೆ ಇದೆ. ಸತ್ತ ಮೇಲೆ ನಾವು ನಮ್ಮ ದೇಹದ ಅಧಿಕಾರವನ್ನು ಕಳೆದುಕೊಂಡು ವಾರಸುದಾರರು ಅಧಿಕಾರವನ್ನು ಹೊಂದುತ್ತಾರೆ. ಆದ್ದರಿಂದ ಇಡೀ ಕುಟುಂಬದವರು ನೇತ್ರದಾನಕ್ಕೆ ಅನುಮತಿ ಕೊಡುವಂತೆ ಪ್ರಯತ್ನಿಸಬೇಕು.

## ಯಾರು, ಹೇಗೆ ನೇತ್ರದಾನ ಮಾಡಬಹುದಾಗಿದೆ ?

೧. ನೇತ್ರದಾನಕ್ಕಾಗಿ ಮರಣಕ್ಕೆ ಪೂರ್ವವೇ ಮರಣೋತ್ತರ ನೇತ್ರದಾನಿ ಎಂದು ನೋಂದಾಯಿಸಲೇಬೇಕೆಂಬ ಕಡ್ಡಾಯವೇನೂ ಇಲ್ಲ.

೨. ನೇತ್ರದಾನಕ್ಕೆ ಶೈಶವ ಮುಪ್ಪು, ಕನ್ನಡಕಧಾರಣೆ ಮಧುಮೇಹ (ಸಕ್ಕರೆ) ರೋಗ, ರಕ್ತದ ಒತ್ತಡ ಮುಂತಾದ ಕಣ್ಣಿಗೆ ಅಥವಾ ದೇಹಕ್ಕೆ ಸಂಬಂಧಿಸಿದ ಯಾವುದೇ ರೋಗಗಳು ಅಡ್ಡಿಯನ್ನುಂಟು ಮಾಡುವದಿಲ್ಲ.

೩. ಮರಣ ಹೊಂದಿದ ೪-೬ ತಾಸುಗಳೊಳಗಾಗಿ ನೇತ್ರ ಸಂಗ್ರಹಿಸಿ ಮರಣಾನಂತರದ ೪೮ ತಾಸುಗಳ ಅವಧಿಯೊಳಗಾಗಿ ಕಸಿ ಮಾಡಬೇಕಾದ್ದರಿಂದ ಮರಣ ಹೊಂದಿದ ಸಮಯವನ್ನು ಸರಿಯಾಗಿ ದಾಖಲಿಸಬೇಕು.

೪. ಸತ್ತವರ ಕಣ್ಣು ರೆಪ್ಪೆಗಳನ್ನು ಸರಿಯಾಗಿ ಮುಚ್ಚಬೇಕು, ಹತ್ತಿರದ ಫ್ಯಾನನ್ನು ಆರಿಸಬೇಕು. ತಣ್ಣನೆ ನೀರಿನ ಬಟ್ಟೆಯನ್ನು ಕಣ್ಣಿನ ಮೇಲೆ ಇಡಬೇಕು.

೫. ನೇತ್ರದಾನ ಸ್ವೀಕಾರ ಮಾಡುವ ನೇತ್ರ ಭಂಡಾರವನ್ನು ಸಾಧ್ಯವಿದ್ದಷ್ಟು ಕೂಡಲೇ ಕರೆಯಬೇಕು.

೬. ನೇತ್ರ ಭಂಡಾರಗಳು ಸಾಮಾನ್ಯವಾಗಿ ಹಗಲು/ರಾತ್ರಿ ೨೪ ಘಂಟೆಗಳ ಕಾಲವೂ ಕಾರ್ಯನಿರ್ವಹಿಸುತ್ತವೆ.



## ಕಣ್ಣುಗಳನ್ನು ಮೃತ ದೇಹದಿಂದ ಹೊರಗೆ ತೆಗೆಯುವುದು

೧. ನೇತ್ರ ಸ್ವೀಕರಿಸುವ ನಮ್ಮ ತಂಡವು ತಡಮಾಡದೇ ಆಸು ನೀಗಿದ ಸ್ಥಳಕ್ಕೆ ಅಂದರೆ ಮನೆ, ಆಸ್ಪತ್ರೆ, ಚಿತಾಗಾರ ಸ್ಮಶಾನ ಅಥವಾ ಶವವಿರುವ ಸ್ಥಳಕ್ಕೆ ಧಾವಿಸುತ್ತದೆ.

೨. ನೇತ್ರ ಸಂಗ್ರಹಣಾ ತಂಡವು ಪ್ರತಿನಿತ್ಯ ೨೪ ತಾಸುಗಳ ಪರ್ಯಂತ ಕಾರ್ಯ ನಿರ್ವಹಿಸುತ್ತದೆ.

೩. ಶಸ್ತ್ರಕ್ರಿಯೆಯ ಮೂಲಕ ಕಣ್ಣುಗಳನ್ನು ತೆಗೆದುಕೊಳ್ಳಲು ಯಾವುದೇ ಬೆಲೆ ಅಥವಾ ಶುಲ್ಕ ವಿಧಿಸುವುದಿಲ್ಲ.

೪. ಮೃತರ ವಾರಸುದಾರರು ನೇತ್ರದಾನಕ್ಕೆ ಒಪ್ಪಿ ಅನುಮತಿ ಪತ್ರಕ್ಕೆ ಸಹಿ ಹಾಕಿದ ಮೇಲೆ ಕಣ್ಣುಗಳನ್ನು ಸ್ವೀಕರಿಸಲಾಗುವುದು.

೫. ಕಣ್ಣುಗಳನ್ನು ಮೃತದೇಹದಿಂದ ಹೊರತೆಗೆಯಲು ಸುಮಾರು ೧೫ ನಿಮಿಷಗಳು ಬೇಕಾಗಬಹುದು.

೬. ಮೃತರ ಕಣ್ಣುರೆಪ್ಪೆಗಳನ್ನು ಜಾಗರೂಕತೆಯಿಂದ ಮುಚ್ಚಿ ಹೊಲಿಗೆ ಹಾಕುವದರಿಂದ ಕಣ್ಣು ಹೊರಗೆ ತೆಗೆದುಕೊಂಡ ನಂತರವೂ ಶವದ ಮುಖ ವಿಕಾರವಾಗುವುದಿಲ್ಲ.

೭. ಸಂಗ್ರಹಿಸಿದ ಕಣ್ಣುಗಳನ್ನು ೪° ಸಿ, ಉಷ್ಣತೆಯಲ್ಲಿ ಶೀತಲೀಕರಣ ಯಂತ್ರದೊಳಗೆ ಮತ್ತು ಇನ್ನಿತರ ವಿಧಾನಗಳಿಂದ ಜೋಪಾನ ಮಾಡಲಾಗುವುದು.

೮. ನೇತ್ರದಾನ ನೀಡಿದ ಕುಟುಂಬಕ್ಕೆ ನಮ್ಮ ನೇತ್ರಭಂಡಾರದಿಂದ ಮೆಚ್ಚುಗೆಯ ಪ್ರಮಾಣ ಪತ್ರ ನೀಡಲಾಗುವುದು.

೯. ದಾನ ಮಾಡಿದ ಕಣ್ಣುಗಳು ಅತ್ಯಮೂಲ್ಯ ಅವುಗಳಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ, ತ್ಯಾಗ ಆನಂದದ ಹೊರತಾಗಿ ಯಾವುದೇ ಪ್ರತಿಫಲ ಅಪೇಕ್ಷಿಸಬೇಡಿ.

## ನೇತ್ರದಾನದ ವಿಧಾನ

೧. ೧೮ ವರ್ಷ ವಯಸ್ಸಿಗೆ ಮೇಲ್ಪಟ್ಟಯಾರು ಬೇಕಾದರೂ ನೇತ್ರದಾನಿಗಳೆಂದು ನಮ್ಮ ನೇತ್ರ ಭಂಡಾರದಲ್ಲಿ ಹೆಸರು ನೋಂದಾಯಿಸಬಹುದಾಗಿದೆ.

೨. ಈ ರೀತಿಯ ನೋಂದಣಿಗೆ ಯಾವುದೇ ಶುಲ್ಕವಿಲ್ಲ. ಹೆಸರು ನೋಂದಾಯಿಸಿದ ವ್ಯಕ್ತಿ ಯಾವಾಗಲೂ ತನ್ನ ಬಳಿ ಇಟ್ಟುಕೊಳ್ಳಬೇಕಾದ ಗುರುತಿನ ಕಾರ್ಡೊಂದನ್ನು ನೀಡಲಾಗುವುದು.

೩. ಇಚ್ಛಿತ ನೇತ್ರದಾನಿಗಳು ನಿಗದಿತ ಅರ್ಜಿ ಫಾರ್ಮನ್ನು ಭರ್ತಿ ಮಾಡಿ ನಮ್ಮ ನೇತ್ರ ಭಂಡಾರಕ್ಕೆ ಕಳಿಸಿಕೊಡಿರಿ.

೪. ಮರಣ ಹೊಂದಿದ ಸ್ಥಳಕ್ಕೆ ಹತ್ತಿರವಿದ್ದ ನೇತ್ರ ಬ್ಯಾಂಕಿಗೆ ನೋಂದಾಯಿತ ನೇತ್ರದಾನಿಯ ಕಣ್ಣುಗಳನ್ನು ದಾನ ಮಾಡಬಹುದಾಗಿದೆ.

೫. ಹೀಗೆ ದಾನ ಮಾಡಿದ ಪ್ರತಿ ಒಂದು ಜೊತೆ ಕಣ್ಣುಗಳು ಇಬ್ಬರು ಅಂಧರಿಗೆ ದೃಷ್ಟಿ ನೀಡುವ ಭಾಗ್ಯ ಪಡೆದಿವೆ.

೬. ಎಲ್ಲಾ ಶುಶ್ರೂಷಕರು, ವೈದ್ಯರುಗಳು, ಯುವಜನತೆ ಧರ್ಮಾಧಿಕಾರಿಗಳು, ಪ್ರಸಾರ ಮಾಧ್ಯಮಗಳು, ಜನರ ಮನ ಒಲಿಸಿ, ನೇತ್ರದಾನ ಮಾಡಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

೭. ನೇತ್ರದಾನದ ದಿವ್ಯ ಸಂದೇಶವನ್ನು ಹರಡಲು ಎಲ್ಲರೂ ಸಹಕರಿಸಿ

೮. ನೇತ್ರದಾನದ ಮಾಹಿತಿ ಕೇಂದ್ರವನ್ನು ನಿಮ್ಮ ಮನೆಯಲ್ಲೂ ತೆರೆಯಬಹುದು.

೯. ನೇತ್ರದಾನಕ್ಕೆ ಹೆಸರು ನೊಂದಾಯಿಸಿ ನಿಮ್ಮ ಮತ್ತು ನಿಮ್ಮ ಬಂಧು ಮಿತ್ರರ ನೇತ್ರದಾನ ಮಾಡಿ ಆತ್ಮಾನಂದವನ್ನು ಪಡೆಯಿರಿ.

## ಒಟ್ಟಾರೆ ಹೇಳಬೇಕಾದದಿಷ್ಟು

★ ಅತ್ಯಮೂಲ್ಯವಾದ ಕಣ್ಣುಗಳನ್ನು ದಯವಿಟ್ಟು ಮಣ್ಣಿಗೆ ಅಥವಾ ಅಗ್ನಿಗೆ ಆಹುತಿ ಕೊಡಬೇಡಿ

★ ನೇತ್ರದಾನವು ದೇವರಿಗೆ ನಾವು ಮಾಡುವ ಅನುಪಮ ಸೇವೆಯಾಗಿದೆ ಮತ್ತು ಆ ದಯಾಘನನಿಗೆ ಸಲ್ಲಿಸುವ ಉಪಕಾರ ಸ್ಮರಣೆಯಾಗಿದೆ.

★ ಸತ್ತು ಹೋದ ದೇಹದ ಕಣ್ಣುಗಳು ಚಿಕಿತ್ಸೆ ಪಡೆದ ದೇಹದಲ್ಲಿ ಜೀವಂತವಾಗಿರುತ್ತವೆ.

★ ನೇತ್ರದಾನವು ಪರಮ - ಪವಿತ್ರ ಕಾರ್ಯವಾಗಿದೆ.

## ನಾವು ನಿಮ್ಮಿಂದ ಅಪೇಕ್ಷಿಸುವುದೇನು

ನೇತ್ರದಾನದ ಈ ಸುದ್ದಿ-ಸಂಗತಿಯನ್ನು ದಯವಿಟ್ಟು ನಿಮ್ಮ ಕುಟುಂಬದ ಸದಸ್ಯರಿಗೆ, ಬಂಧು ಬಳಗದವರಿಗೆ, ಮಿತ್ರರಿಗೆ, ಸಹೋದ್ಯೋಗಿಗಳಿಗೆ, ನೆರೆಹೊರೆಯವರಿಗೆ ಮತ್ತು ನಿಮಗೆ ಸಂಪರ್ಕ ಬರುವ ಪ್ರತಿಯೊಬ್ಬರಿಗೂ ತಿಳಿಸುವ ಪ್ರಸಾರ ಮಾಡುವ ಪವಿತ್ರ ಕಾರ್ಯವನ್ನು ಮಾಡಿ. ಈ ಬಗ್ಗೆ ನಿಮ್ಮ ಹೃದಯ ಮಿಡಿಯಲಿ, ಮನಸ್ಸು ಹಾತೊರೆಯಲಿ, ಹಂಬಲಿಸಲಿ, ಅಂಧತ್ವ ನಿವಾರಣೆಯಂತಹ ಘನ-ಪುಣ್ಯ ಕಾರ್ಯಕ್ಕೆ ಸಹಕಾರಿಯಾಗುವ ಭಾಗ್ಯವಂತರು ತಾವಾಗಿ. ಈ ದಿಶೆಯಲ್ಲಿ ಸಹೃದಯತೆಯಿಂದ ಮುಂದೆ ಮುಂದೆ ಸಾಗಿ ಸೇವೆ ಮಾಡಿದ ಪರಮಾನಂದದ ಸಂತೃಪ್ತಿ ತಮ್ಮದಾಗಲಿ.

ಬನ್ನಿ ನಾವೆಲ್ಲರೂ ಕೈಜೋಡಿಸೋಣ, ನಾವೆಲ್ಲರೂ ಒಗ್ಗಟ್ಟಾಗಿ ಒಮ್ಮನಸ್ಸಿನಿಂದ ಆಲೋಚಿಸೋಣ, ಕಾರ್ಯೋನ್ಮುಖರಾಗೋಣ ಲಕ್ಷ ಲಕ್ಷ ಅಂಧರ ಬಾಳಿಗೆ ಕತ್ತಲೆಯನ್ನೋಡಿಸಿ ಬೆಳಕು ಚೆಲ್ಲುವ ನಂದಾದೀಪವಾಗೋಣ. ಸಂತಸದ ಬುಗ್ಗೆಯನ್ನು ಚಿಮ್ಮಿಸೋಣ ಬನ್ನಿ.

★★★



ಈ. ಡಿ. ಸಂಖ್ಯೆ : ______

# ಬಿ. ವ್ಹಿ. ವ್ಹಿ. ನೇತ್ರ ಭಂಡಾರ ಮತ್ತು ಪಾರದರ್ಶಕ ಪಟಲ ಜೋಡಣಾ ಕೇಂದ್ರ, ಬಾಗಲಕೋಟೆ

ದೂರವಾಣಿ ಸಂಖ್ಯೆ - ☎ : 08354-235400, 235410, 324999
(ಸದಸ್ಯರು, ಐ ಬ್ಯಾಂಕ್ ಅಸೋಸಿಯೇಶನ್ ಇಂಡಿಯಾ, ಹೈದ್ರಾಬಾದ್)

ದಯವಿಟ್ಟು ಅರ್ಜಿ ಪತ್ರವನ್ನು ಸ್ಪಷ್ಟವಾಗಿ ಭರ್ತಿ ಮಾಡಿರಿ

ನಾನು ಶ್ರೀ/ಶ್ರೀಮತಿ ______
(ಪೂರ್ಣ ಹೆಸರು)

ವಯಸ್ಸು ______ ವಿದ್ಯಾರ್ಹತೆ ______ ಹುದ್ದೆ ______
ಅವಿವಾಹಿತರು/ವಿವಾಹಿತರು

ಜನ್ಮ ದಿನಾಂಕ : ______

| ಕಛೇರಿಯ ವಿಳಾಸ | ಮನೆಯ ವಿಳಾಸ |
|---|---|
| ______ | ______ |
| ______ | ______ |
| ______ | ______ |
| ದೂರವಾಣಿ ನಂ. ______ | ದೂರವಾಣಿ ನಂ. ______ |

ನಾನು ಸಂಪೂರ್ಣ ಮಾನಸಿಕ ಸ್ವಾಸ್ಥ್ಯ ಹೊಂದಿದ್ದು ಮಾನವ ಜನಾಂಗದ ಸೇವೆ ಮಾಡುವ ಸದುದ್ದೇಶ ಮತ್ತು ಸ್ವಯಂ ಪ್ರೇರಣೆಯಿಂದ ದಿನಾಂಕ ______ ರಂದು ಈ ಮೂಲಕ ನನ್ನ ಮರಣಾ ನಂತರ ನೇತ್ರಗಳನ್ನು ದೃಷ್ಟಿ ಲಾಭ ಕಾರ್ಯಕ್ಕಾಗಿ ದಾನ ಮಾಡಿದ್ದೇನೆ.

ದಾನಿಯ ಸಹಿ

ಸಾಕ್ಷಿಗಳು (ಹತ್ತಿರದ ಬಂಧುಗಳಿದ್ದರೆ ಉತ್ತಮ)

| | |
|---|---|
| ೧) ಸಹಿ ______ | ೨) ಸಹಿ ______ |
| ಹೆಸರು ______ | ಹೆಸರು ______ |
| ವಿಳಾಸ ______ | ವಿಳಾಸ ______ |

ಯಿಂದ : ☎ : 08354-235400, 235410, **324999**

ಹೆಸರು :

ವಿಳಾಸ :

ಗೆ,

ಬಿ.ವ್ಹಿ.ವ್ಹಿ. ನೇತ್ರ ಭಂಡಾರ ಮತ್ತು ಪಾರದರ್ಶಕ ಪಟಲ ಜೋಡಣಾ ಕೇಂದ್ರ,
ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು
ಹಾನಗಲ್ ಶ್ರೀ ಕುಮಾರೇಶ್ವರ ಆಸ್ಪತ್ರೆ.ವ ಸಂಶೋಧನಾ ಕೇಂದ್ರ,
ಬಾಗಲಕೋಟ - ೫೮೭ ೧೦೧.

**ಅಂಧರ ಬಾಳಿಗೆ ಬೆಳಕಾಗಿ**